## ಬಸವರಾಜ ಬೊಮ್ಮಾಯಿ ಹೇಳಿಕೆ • ವಿಶ್ವೇಶ್ವರ ಭಟ್ ಸೇರಿ ನಾಲ್ವರ ಪುಸ್ತಕಗಳು ಬಿಡುಗಡೆ

# 'ಸರ್ಕಾರದ ಪ್ರೋತ್ಸಾಹ ಹೆಚ್ಚಾದರೆ ಕಳಪೆ ಸಾಹಿತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಸ್ತಕೋದ್ಯಮಕ್ಕೆ ಸರ್ಕಾರದ ಪ್ರೋತ್ಸಾಹ ಹೆಚ್ಚಾದಂತೆ ಸಾಹಿತ್ಯದ ಗುಣಮಟ್ಟ ಕಡಿಮೆ ಆಗುತ್ತದೆ. ಆದ್ದರಿಂದ ಪುಸ್ತಕೋದ್ಯಮ ಬೆಳೆಯಲು ಸಮಾಜದ ಪ್ರೋತ್ಸಾಹ ಅತ್ಯಗತ್ಯ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

'ವಿಶ್ವವಾಣಿ ಪುಸ್ತಕ' ನಗರದಲ್ಲಿ ಶನಿವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅವರ 'ಸಂಪಾದಕರ ಸದ್ಯಶೋಧನೆ' ಮೂರು ಭಾಗಗಳು, ಕಿರಣ್ ಉಪಾಧ್ಯಾಯ ಅವರ 'ಹೊರ ದೇಶವಾಸಿ', ರೂಪಾ ಗುರುರಾಜ್ ಅವರ 'ಒಂದೊಳ್ಳೆ ಮಾತು-2' ಹಾಗೂ ಶಿಶಿರ್ ಹೆಗಡೆ ಅವರ 'ಶಿಶಿರ ಕಾಲ' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು.

'ಪುಸ್ತಕೋದ್ಯಮ ಮೊದಲಿನಿಂದಲೂ ಸಂಕಷ್ಟ ಎದುರಿಸುತ್ತಿದೆ. ಈ ಉದ್ಯಮ ಓದುಗರಿಂದ ಬೆಳೆಯಬೇಕು.



ಕಾರ್ಯಕ್ರಮದಲ್ಲಿ ಬಸವರಾಜ ಬೊಮ್ಮಾಯಿ ಪುಸ್ತಕಗಳನ್ನು ಬಿಡುಗಡೆ ಮಾಡಿದರು. ರೂಪಾ ಗುರುರಾಜ್, ಶಿಶಿರ್ ಹೆಗಡೆ, ಪ್ರದೀಪ್ ಈಶ್ವರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಶ್ವೇಶ್ವರ ಭಟ್ ಹಾಗೂ ಕಿರಣ್ ಉಪಾಧ್ಯಾಯ ಇದ್ದಾರೆ
—ಪ್ರಜಾವಾಣಿ ಚಿತ್ರ

ಸರ್ಕಾರದ ಪ್ರೋತ್ಸಾಹ ಹೆಚ್ಚಾದಂತೆ ಕಳಪೆ ಸಾಹಿತ್ಯ ಹೆಚ್ಚಾಗುತ್ತದೆ. 200 ಪುಟಗಳ ಪುಸ್ತಕ ಬರೆದರೆ ಲಕ್ಷ ರೂಪಾಯಿ ಎಂದು ಘೋಷಿಸಿದರೆ ವರ್ಷಕ್ಕೆ 5–6 ಪುಸ್ತಕಗಳನ್ನು ಬರೆಯುವ ಸಾಹಿತಿಗಳು ಹುಟ್ಟಿಕೊಳ್ಳುತ್ತಾರೆ. ಓದುಗರು ಸಾಹಿತ್ಯ ಕೃತಿಗಳನ್ನು ಖರೀದಿ ಮಾಡಿ, ಅದರ ಆದಾಯ ಲೇಖಕನಿಗೆ ಸಿಗುವವರೆಗೂ ಪುಸ್ತಕೋದ್ಯಮ ಸಂಕಷ್ಟದಲ್ಲಿಯೇ ಇರುತ್ತದೆ. ಹೀಗಾಗಿ, ಸಮಾಜ ಹಾಗೂ ಸರ್ಕಾರದಿಂದ ಸೂಕ್ತ ಪ್ರೋತ್ಸಾಹ ಸಿಗಬೇಕು' ಎಂದರು.

ಶಾಸಕ ಪ್ರದೀಪ್ ಈಶ್ವರ್ ಮಾತನಾಡಿ, 'ರಾಜಕೀಯ ನಾಯಕರು ಇಷ್ಟವಾದರೆಂಬ ಕಾರಣಕ್ಕೆ ಅವರ ಹಿಂದೆ ಹೋಗಿ, ಜೀವನವನ್ನು ಹಾಳು ಮಾಡಿಕೊಳ್ಳಬಾರದು. ರಾಜಕೀಯ ನಾಯಕರು ಕೇವಲ ತಮ್ಮ ಭವಿಷ್ಯದ ಬಗ್ಗೆ ಯೋಚಿಸುತ್ತಾರೆ. ನಾಯಕರನ್ನು ನಂಬಿ ಜೀವನದಲ್ಲಿ ಕಷ್ಟ ಅನುಭವಿಸಿದ್ದೇನೆ' ಎಂದು ಹೇಳಿದರು.